# ವಚನಗಳ ಪ್ರಸ್ತುತತೆ

ಸಂಪಾದಕರು
ಡಾ. ಆರ್. ವಿ. ಪಾಟೀಲ
ಪ್ರೊ. ಬಿ. ಬಿ. ಡೆಂಗನವರ




ಸೌಮ್ಯ ಪ್ರಕಾಶನ, ವಿಜಾಪುರ

# ಪರಿವಿಡಿ


- ಮುನ್ನುಡಿ v
- ಪ್ರಸ್ತಾವನೆ ix
- ಪ್ರಕಾಶಕರ ಮಾತು xii

## ಭಾಗ–೧

೧. ವಚನ ಸಾಹಿತ್ಯ:ವೈವಿಧ್ಯ–ವಿಸ್ತಾರ–ಪ್ರಸ್ತುತತೆ ೩
ಡಾ. ವ್ಹಿ. ಎಸ್. ಮಾಳಿ

೨. ವಚನಕಾರರು ಮತ್ತು ವಚನಗಳ ಪ್ರಸ್ತುತತೆ ೧೧
ಡಾ. ಸೋಮನಾಥ ಯಾಳವಾರ

೩. ವಚನ ಸಾಹಿತ್ಯ ಮತ್ತು ಕೆಳವರ್ಗದ ವಚನಕಾರರು ೨೦
ಪ್ರೊ. ಸೂಗಯ್ಯ ಹಿರೇಮಠ

೪. ಕೆಳವರ್ಗದ ವಚನಕಾರರಲ್ಲಿ ಅನುಭಾವ ೩೦
ಡಾ. ಬಿ. ಜೆ. ಬಿರಾದಾರ

೫. ವಚನ ಸಾಹಿತ್ಯ ಮತ್ತು ಸಮಾನತೆಯ ತತ್ತ್ವ ೪೬
ಡಾ. ಎಸ್. ವ್ಹಿ. ಅಯ್ಯನಗೌಡರ

೬. ವಚನಕಾರರಲ್ಲಿ ಅರಿವು–ಆಚಾರ ಒಂದು ಚರ್ಚೆ ೫೫
ಡಾ. ಶ್ರೀಶೈಲ ನಾಗರಾಳ

೭. ವಚನಕಾರ್ತಿಯರ ವಚನಗಳ ವಿವೇಚನೆ ೫೯
ಪ್ರೊ. ಬಿ. ಬಿ. ಡೆಂಗನವರ

೮. ವಚನಗಳಲ್ಲಿ ಕಾವ್ಯಮಿಮಾಂಸೆ ೬೮
ಪ್ರೊ. ವಾಯ್. ವಾಯ್. ಕೊಕ್ಕನವರ

೯. ಅಲಕ್ಷಿತ ವಚನಕಾರರಲ್ಲಿ ಅನುಭಾವ ಮತ್ತು ಕುಲ ಜಾತಿ ವಿಚಾರ ೭೭
ಪ್ರೊ. ಎಂ. ಎಸ್. ಮಾಗಣಗೇರಿ

೧೦. ಕೆಳವರ್ಗದ ವಚನಕಾರರಲ್ಲಿ ವಿಡಂಬನೆ ೮೩
ಡಾ. ಮಹಾಂತೇಶ ಉಕ್ಕಲಿ

# ಅಲಕ್ಷಿತ ವಚನಕಾರರಲ್ಲಿ–ಅನುಭಾವ ಮತ್ತು ಕುಲ ಜಾತಿ ವಿಚಾರ

• ಪ್ರೊ. ಎಂ. ಎಸ್. ಮಾಗಣಗೇರಿ

'ಅನುಭಾವ' ಎಂಬ ಪದ ಶರಣರು ಆಧ್ಯಾತ್ಮಿಕ ಪ್ರಪಂಚಕ್ಕೆ ಕೊಟ್ಟ ಕಾಣಿಕೆ. 'ಅನುಭಾವ' ಆಧ್ಯಾತ್ಮಿಕ ಸಾಧಕನ ಭಗವತ್ಪರವಾದ ಹಂಬಲ, ಭಕ್ತ ಮತ್ತು ಭಗವಂತನ ನಡುವಣ ಆತ್ಮೀಯ ಸಂಬಂಧವನ್ನು ಸೂಚಿಸುತ್ತದೆ. ಇದು ಮೂರು ಮುಖ್ಯವಾದ ಅಂಶಗಳನ್ನೊಳಗೊಂಡಿದೆ. 'ಪರಮಾತ್ಮ–ಜೀವಾತ್ಮ' ಇವುಗಳ ಸಂಬಂಧದಿಂದ ಉಂಟಾಗುವ ಅಮೃತತ್ವ, ಪರಮಾತ್ಮನೊಡನೆ ಸಮರಸಗೊಂಡು ಅಮೃತತ್ವವನ್ನು ಪಡೆಯಬೇಕೆಂಬ ಜೀವಾತ್ಮದ ನಿರಂತರ ಹಂಬಲವನ್ನು ಅವುಗಳನ್ನು ದಾಟಿದ 'ಒಳ ಅರಿವು' ಅಥವಾ ಅಂತರ್ ದೃಷ್ಟಿಯಿಂದ ಅನುಭೂತವಾಗುತ್ತದೆ. ಇದನ್ನು ಇನ್ನೂ ಸರಳವಾಗಿ ಹೇಳುವುದಾದರೆ, 'ಅನುಭವ' ಲೌಕಿಕ ಜೀವನಕ್ಕೆ ಸಂಬಂಧಿಸಿದ್ದಾದರೆ, 'ಅನುಭಾವ' ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ್ದು. ಅನುಭವ ಮಾನವರ ಸಂಬಂಧದಿಂದ ಉಂಟಾದರೆ, ಅನುಭಾವ ದೇವರ ಸಂಬಂಧದಿಂದ ಉಂಟಾಗುವುದು. ಅನುಭವ ಬಹಿರಂಗ ಜೀವನ ವ್ಯಾಪಾರಗಳಿಗೆ ಸಂಬಂಧಿಸಿದ್ದು ಅನುಭಾವ ಅಂತರಂಗದ ಅನುಭವಕ್ಕೆ ಸಂಬಂಧಿಸಿದ್ದು. ಅನುಭವ ದೇಹಕ್ಕೆ ಸಂಬಂಧಪಟ್ಟರೆ, ಅನುಭಾವ ಆತ್ಮಕ್ಕೆ ಸಂಬಂಧಿಸಿದ್ದಾಗಿದೆ.

ಸೂತ್ರ ರೂಪವಾಗಿ ಹೇಳುವುದಾದರೆ 'ಆಧ್ಯಾತ್ಮಿಕ ಸಾಧನೆ ಸಿದ್ಧಿಗಳ ಅನುಭವವೇ ಅನುಭಾವ' ಪರಮಾತ್ಮನನ್ನು ಒಳಗಣ್ಣಿನಿಂದ ನೇರವಾಗಿ, ಮುಖಾಮುಖಿಯಾಗಿ ನೋಡಿ ಅನುಭವಿಸುವ ಒಂದು ಅನುಭವವೇ ಅನುಭಾವ. ಇಲ್ಲಿ ದೇವರು ಭಕ್ತನಿಗೆ ಹೊರಗಿನ ವಸ್ತುವಾಗಿ ಉಳಿಯದೆ, ಆತನ ಅಂತರಂಗದಲ್ಲಿಯೇ ನಿರಂತರವಾಗಿ ಬೆಳಗುವ ಜ್ಯೋತಿಯಾಗಿರುತ್ತಾನೆ. ಇದನ್ನೆ ಭಗವಂತನ ಸಾಕ್ಷಾತ್ಕಾರ ವೆಂದು ಕರೆಯುತ್ತೆವೆ. ಈ ಅನುಭಾವ ಸ್ವಾನುಭವವೇದ್ಯ ಮಾತು ವರ್ಣನೆಗಳಿಗೆ ನಿಲುಕದ ಅಪೂರ್ವ ಅನುಭವ. 'ಮಾತು ಮನಂಗಳಿಂದತ್ತತ್ತ ಇರುವ ಜ್ಯೋತಿಯದು' ಇದು ಇಂದ್ರಿಯ ಮನಸ್ಸುಗಳಿಗೆ ಅತೀತವಾದ ಪ್ರಜ್ಞೆ ಬುದ್ಧಿ–ತರ್ಕಗಳಿಗೆ ಮೀರಿದ್ದು.

# ವಚನಗಳ ಪ್ರಸ್ತುತತೆ

'ವಚನ' ಕನ್ನಡದ ಪ್ರಥಮ ಚಳುವಳಿ ಮಾಧ್ಯಮ ಸಾಹಿತ್ಯ. ಶರಣರ ಸಮಾಜೋಧಾರ್ಮಿಕ ಸಮಗ್ರ ಚಳುವಳಿಯ ಉಪಸೃಷ್ಟಿ. ವರ್ಗ-ವರ್ಣ-ಲಿಂಗ ಭೇದರಹಿತ ಸರ್ವ ಮಾನವ ಶಕ್ತಿಗಳ ಸಮಷ್ಟಿ ಸಂಘಟನೆಗಾಗಿ ದುಡಿದ, ಮಾನವ ಬದುಕಿಗೊಂದು ಹೊಸ ಅರ್ಥ-ಆವಿಷ್ಕಾರ-ಚೈತನ್ಯ ಮೂಡಿಸಲು ಮಿಡಿದ ಆತ್ಮ ಸಾಹಿತ್ಯ. ಬದುಕಿನ ಎಲ್ಲ ಸಮಸ್ಯೆಗಳನ್ನು ಸುತ್ತು ಹಾಕಿಕೊಂಡು ಅವುಗಳಿಗೆ ಅರ್ಥಪೂರ್ಣವಾಗಿ ಸೂಕ್ತ ಪರಿಹಾರ ಕೈಕೊಳ್ಳಲು ಪ್ರಯತ್ನಿಸಿದ ಮಾನವೀಯ ಸಾಹಿತ್ಯ.

ಇಂದಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಬದುಕಿನ ಒಳಿತು-ಕೆಡುಕುಗಳಿಗೆ ನೀಡುವ ಪ್ರತಿಕ್ರಿಯೆ, ಪರಿಹಾರ, ಅದರಿಂದ ಸುಖೀಸಮಾಜ, ಸುಂದರ ಬದುಕು, ಜಾಗತಿಕ ನೆಮ್ಮದಿ ರೂಪಿಸಿಕೊಳ್ಳಲು ಹೇಗೆ ಸಾಧ್ಯ ಎಂಬುದನ್ನು ತುಂಬ ಪರಿಣಾಮಕಾರಿಯಾಗಿ ಬಿಂಬಿಸುತ್ತವೆ. ಇಂದಿನ ಎಲ್ಲ ಅಸಾಂಗತ್ಯಗಳಿಗೆ, ಸಮಸ್ಯೆಗಳಿಗೆ ವಚನ ಸಾಹಿತ್ಯದಲ್ಲಿ ಸಮರ್ಪಕವಾದ ಉತ್ತರವಿದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ತಮ್ಮ ಮಹಾವಿದ್ಯಾಲಯದಲ್ಲಿ ನಡೆದ ಯು.ಜಿ.ಸಿ. ಪ್ರಾಯೋಜಿತ ವಿಚಾರ ಸಂಕಿರಣದಲ್ಲಿ ಮಂಡಿತವಾದ ಮಹತ್ವದ ವಿಚಾರಗಳುಳ್ಳ ಪ್ರಬಂಧಗಳನ್ನು ಪರಿಶ್ರಮದಿಂದ ಕ್ರೋಡೀಕರಿಸಿ, ಶಾಸ್ತ್ರೀಯವಾಗಿ ವರ್ಗೀಕರಿಸಿ ಸಂಪಾದನಕಾರ್ಯ ನಿರ್ವಹಿಸಿದ, ಡಾ. ಆರ್. ವಿ. ಪಾಟೀಲ, ಪ್ರೊ. ಬಿ. ಬಿ. ಡೆಂಗನವರ ಹಾಗೂ ಗ್ರಂಥದ ಪ್ರಕಾಶಕರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಇವರ ಈ ಕಾರ್ಯ ಉಳಿದ ಮಹಾವಿದ್ಯಾಲಯಗಳಿಗೆ ಮಾದರಿಯಾಗಿದೆ, ಪ್ರೇರಕವೆನಿಸಿದೆ. 'ವಚನಗಳ ಪ್ರಸ್ತುತತೆ' ವಚನ ಸಾಹಿತ್ಯ ಅಧ್ಯಯನ ಕ್ಷೇತ್ರಕ್ಕೆ ಒಂದು ಮೌಲಿಕ ನೂತನ ಸೇರ್ಪಡೆಯಾಗಿದೆ. ಕನ್ನಡ ಸಾರಸ್ವತಲೋಕ ಇದನ್ನು ತುಂಬು ಹೃದಯದಿಂದ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ. ಸಂಪಾದಕದ್ವಯರನ್ನು ಮತ್ತೊಮ್ಮೆ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

**ಡಾ. ವೀರಣ್ಣ ರಾಜೂರ**



ISBN : 978-81-922389-8-2